ಇ) ರೂ. 5.00 ಲಕ್ಷಗಳ ಅನುದಾನವನ್ನು ಹೊರತುಪಡಿಸಿ ಬೇರೆಯಾವುದೇ ಸೌಲಭ್ಯ ಒದಗಿಸಲಾಗುತ್ತಿಲ್ಲ.

ಚಿಂತಾಮಣಿ ತಾಲ್ಲೂಕಿನ ಕಂಚಾರ್ಲಹಳ್ಳಿ ಗ್ರಾಮದಲ್ಲಿ ಪಶುವೈದ್ಯ ಚಿಕಿತ್ಸಾಲಯಕ್ಕೆ ನಿವೇಶನ

3646(4147) ಶ್ರೀ ಚೌಡರೆಡ್ಡಿ. (ಚಿಂತಾಮಣಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಕಂಬಾರ್ಲಹಳ್ಳಿ ಗ್ರಾಮದಲ್ಲಿ ಪಶುವೈದ್ಯ ಚಿಕಿತ್ಸಾಲಯಕ್ಕೆ ಸ್ವಂತ ಕಟ್ಟಡ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ ಕೋಲಾರವರು ಸ್ವಂತ ಕಟ್ಟಡ ಕಟ್ಟಲು ಅನುದಾನ ಬಿಡುಗಡೆ ಮಾಡಿರುವುದು ನಿಜವೇ;

ಇ) ಸದರಿ ಚಿಕಿತ್ಸಾಲಯಕ್ಕೆ ಕಟ್ಟಡ ಕಟ್ಟಲು ಸ್ವಂತ ಜಾಗ ಇಲ್ಲದೇ ಕಟ್ಟಡ ಕಟ್ಟಲು ಪ್ರಾರಂಭ ಆಗದೇ ಇರುವುದು ನಿಜವೇ;

ಈ) ಕಂಚಾರ್ಲಹಳ್ಳಿ ಪಂಚಾಯ್ತಿಯಿಂದ ಅಥವಾ ಕಂದಾಯ ಇಲಾಖೆಯಿಂದಾದರೂ ಕಟ್ಟಡ ಕಟ್ಟಲು ನಿವೇಶನ ಮಂಜೂರು ಮಾಡಿಸಿಕೊಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ; (ವಿವರ ನೀಡುವುದು)?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಬಂದಿದೆ.

ಆ) ಇಲ್ಲ

ಇ) ನಿವೇಶನ ಲಭ್ಯವಿರುವುದಿಲ್ಲ ಎಂಬ ವಿಷಯ ನಿಜ

ಈ) ಕೆಂಚಾರ್ಲಹಳ್ಳಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಕ್ಕೆ ಕಟ್ಟಡಕ್ಕೋಸ್ಕರ ನಿವೇಶನ ಒದಗಿಸುವಂತೆ ಗ್ರಾಮ ಪಂಚಾಯತಿಯನ್ನು ಮತ್ತು ಸ್ಥಳೀಯ ಜನಪ್ರತಿನಿಧಿಗಳನ್ನು ಕೋರಲಾಗಿದೆ.

ರಾಜ್ಯ ಸಮಾಜ ಕಲ್ಯಾಣ ಇಲಾಖೆಯ ಲೆಕ್ಕಪತ್ರಗಳ ಆಡಿಟ್

3647(4355) ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸಮಾಜ ಕಲ್ಯಾಣ ಇಲಾಖೆಯ ಲೆಕ್ಕಪತ್ರಗಳನ್ನು ಇಲ್ಲಿಯವರೆಗೆ ಆಡಿಟ್ ಮಾಡಿಸಲಾಗಿದೆ; ಇದರ ವರದಿಯನ್ನು ಸಿ.ಎ.ಜಿ.ರವರಿಗೆ ಸಲ್ಲಿಸಲಾಗಿದೆಯೇ; ಹಾಗಿದ್ದಲ್ಲಿ ಅವರ ಪ್ರತಿಕ್ರಿಯೆ ಏನು;

ಆ) ಸಮಾಜ ಕಲ್ಯಾಣ ಇಲಾಖೆಗೆ ಯಾವ ಯಾವ ಯೋಜನೆಗೆ ಎಷ್ಟೆಷ್ಟು ಕೇಂದ್ರ ನೆರವು ಬರುತ್ತಿದೆ; (ಮೂರು ವರ್ಷಗಳ ವರ್ಷವಾರು ವಿವರ ನೀಡುವುದು);

ಇ) ಕೇಂದ್ರದಿಂದ ಪಡೆದ ಎಲ್ಲಾ ಹಣಕಾಸು ಅನುದಾನಕ್ಕೆ ಲೆಕ್ಕಪತ್ರದ ವಿವರ ಕೇಂದ್ರಕ್ಕೆ ನೀಡಲಾಗಿದೆಯೇ; ಹಾಗಿದ್ದರೆ, ಅವರ ಪ್ರತಿಕ್ರಿಯೆ ಏನು;

ಈ) ಈ ನೆರವಿನ ಪ್ರಮಾಣಕ್ಕೆ ಅನುಗುಣವಾಗಿ ಲೆಕ್ಕಪತ್ರ ನೀಡದಿದ್ದರೆ, ನೆರವಿನ ಪ್ರಮಾಣ ತಗ್ಗುವ ಸೂಚನೆಗಳಿಲ್ಲವೆ; ಈ ಕೊರತೆ ನಿವಾರಿಸಲು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 2001–02ನೇ ಸಾಲಿನವರೆಗೆ ಸಮಾಜ ಕಲ್ಯಾಣ ಇಲಾಖೆಯ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಲಾಗಿದೆ.

ಸಿ.ಎ.ಜಿ. ವರದಿಯಲ್ಲಿ 10 ಕಂಡಿಕೆಗಳಿದ್ದು, 3 ಕಂಡಿಕೆಗಳಿಗೆ ಉತ್ತರಗಳನ್ನು ಕಳುಹಿಸಲಾಗಿದೆ. ಉಳಿದ 7 ಕಂಡಿಕೆಗಳಿಗೆ ತೀರುವಳಿಗೆ ಉತ್ತರ ನೀಡಲು ಕ್ರಮ ಕೈಗೊಳ್ಳಲಾಗಿದ್ದು, ಸಿ.ಎ.ಜಿ. ಯವರ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತಿದೆ.

ಆ) ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ.

ಇ) ಹೌದು.

ಕೇಂದ್ರದಿಂದ ಪಡೆದ ಅನುದಾನ ಹಾಗೂ ಬಿಡುಗಡೆಯನ್ನು ಅನುಸರಿಸಿ ಬಳಕೆ ಪ್ರಮಾಣ ಪತ್ರವನ್ನು ನೀಡಲಾಗಿದೆ. ಇದನ್ನು ಕೇಂದ್ರ ಸರ್ಕಾರದವರು ಒಪ್ಪಿರುತ್ತಾರೆ.

ಈ) ಬಳಕೆ ಪ್ರಮಾಣ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ನೀಡಲಾಗುತ್ತಿರುವುದರಿಂದ ಈ ಪ್ರಮಾಣ ಪತ್ರವನ್ನು ನೀಡದೇ ಇರುವ ಕಾರಣಕ್ಕಾಗಿ ಕೇಂದ್ರ ಸರ್ಕಾರ ಅನುದಾನ ಬಿಡುಗಡೆಯ ಪ್ರಮಾಣವನ್ನು ತಗ್ಗಿಸಿದ ಪ್ರಮೇಯವಿರುವುದಿಲ್ಲ.

ಅನುಬಂಧ

2000–01ನೇ ಸಾಲಿನಿಂದ 2002–03ನೇ ಸಾಲಿನವರೆಗೆ ಸಮಾಜ ಕಲ್ಯಾಣ ಇಲಾಖೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರಗಳು

(ರೂ. ಲಕ್ಷಗಳಲ್ಲಿ)

	ಲೆಕ್ಕ ಶೀರ್ಷಿಕೆ ಮತ್ತು ಯೋಜನೆ ಹೆಸರು	2000–01	2001–02	2002–03
1	2	3	4	5
	ಕೇಂದ್ರ ಪುರಸ್ಕೃತ ಯೋಜನೆಗಳು			
1.	ಪುಸ್ತಕ ಭಂಡಾರಗಳ ಸ್ಥಾಪನೆ			
	2225–01–800–0–06	51.33	2.44	115.63
2.	ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ			
	2225–01–277–0–88	3.03	3.36	11.46
3.	ಬಾಲಕ : ಬಾಲಕಿಯರ ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣ			
	4225–01–277–2–01	325.00	388.53	253.08
4.	ಅಂತರಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ			
	2225–01–800–0–11	60.93	44.16	140.00
	2225–01–800–0–56			
5.	ವಿಚಾರ ಸಂಕಿರಣ ಮತ್ತು ಕಮ್ಮಟ ನಡೆಸುವುದು			
	2225–01–800–0–12	5,00	6,00	6,00

1	2	3	4	5
6.	ನಾಗರೀಕ ಹಕ್ಕು ಸಂರಕ್ಷಣೆ ಯೋಜನೆಗಳು			
	2225-01-800-0-03	10.00	24.58	231.55
7.	ದೌರ್ಜನ್ಯದಲ್ಲಿ ನೊಂದ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್‌ವಸತಿ ಕಲ್ಪಿಸುವ ಕುರಿತು			
	2225-01-800-0-13	100.00	99.85	157.50
8.	ತರಬೇತಿ ಮತ್ತು ಸಂಬಂಧಪಟ್ಟ ಇತರೆ ಯೋಜನೆಗಳು			
	2225-01-277-0-02	0.00	0.00	0.00
	ಕೇಂದ್ರ ವಲಯ ಯೋಜನೆ ಕೇಂದ್ರದ ಪಾಲು ಶೇ.100			
9.	ವಿಶೇಷ ಘಟಕ ಯೋಜನೆಗೆ ವಿಶೇಷ ಕೇಂದ್ರೀಯ ನೆರವು			
	2225-01-793-0-00	2643.37	2985.43	2386.12
	2225-01-191-1-02			
10.	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ			
	2225-01-277-0-76	1111.61	732.13	984.47
	ಒಟ್ಟು	**4310.27**	**4286.48**	**4285.81**

ಕರ್ನಾಟಕ ರಾಜ್ಯ ರೇಷ್ಮೆ ಕೈಗಾರಿಕಾ ಸಂಸ್ಥೆಯ ಕಾರ್ಯ ನಿರ್ವಹಣೆ

3648(4359) ಶ್ರೀ ಗುರುಸ್ವಾಮಿ ಎ.ಎಸ್. : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರೇಷ್ಮೆ ಕೈಗಾರಿಕೆ ನಿಗಮದ ಅಡಿಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಯಾವ ಯಾವ ಸಂಸ್ಥೆಗಳು ಕೆಲಸ ಮಾಡುತ್ತಿವೆ; ಅವುಗಳಲ್ಲಿ ಯಾವ ಯಾವ ಲಾಭದಾಯಕ ಘಟಕಗಳು ಮತ್ತು ನಷ್ಟದಲ್ಲಿರುವ ಘಟಕಗಳು ಯಾವುವು;

ಆ) ನಷ್ಟದಲ್ಲಿರುವ ಘಟಕಗಳನ್ನು ಮುಚ್ಚಲು ಅಥವಾ ಖಾಸಗೀಕರಣ ಮಾಡಲು ಸರ್ಕಾರ ಇಚ್ಚಿಸಿದೆಯೇ;

ಇ) ಈ ಘಟಕಗಳನ್ನು ಮುಚ್ಚುವುದರಿಂದ ಅಲ್ಲಿರುವ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ ನೀಡಲು ಸರ್ಕಾರ ಬಯಸಿದೆಯೇ; ಹಾಗಿದ್ದರೆ ಸರ್ಕಾರಕ್ಕೆ ಈ ಕ್ರಮದಿಂದ ಆಗುವ ವೆಚ್ಚ ಎಷ್ಟು;

ಈ) ಅನಗತ್ಯ ಬಂಡವಾಳ ಮಾಡಲು ಕಾರಣರಾಗಿರುವ ಅಧಿಕಾರಿಗಳು ಯಾರು; ಅವರ ವಿರುದ್ಧ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದ ವ್ಯಾಪ್ತಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಈ ಕೆಳಕಂಡ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ.

1. ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು.

2. ರೇಷ್ಮೆ ನೂಲು ತೆಗೆಯುವ ಘಟಕ, ಟಿ.ನರಸೀಪುರ.

ಆ ಘಟಕಗಳು ಪ್ರಸ್ತುತ ನಷ್ಟದಲ್ಲಿರುತ್ತವೆ. ಚಾಮರಾಜನಗರ ಜಿಲ್ಲೆಯಲ್ಲಿ ಆ ನಿಗಮದ ಅಡಿ ಅಂತಹ ಯಾವುದೇ ಘಟಕಗಳು ಕಾರ್ಯ ನಿರ್ವಹಿಸುತ್ತಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.